ನೀಡಬೇಕೆಂಬ ನಿಲುವನ್ನು ಸರ್ಕಾರವು ಹೊಂದಿದೆ. ಈ ಉದ್ದೇಶ ಈಡೇರಿಕೆಗಾಗಿ ಒಂದರಿಂದ 4 ನೇ ತರಗತಿಯವರೆಗೆ ಶಾಲೆಗಳನ್ನು ಪ್ರಾರಂಭಿಸುವ ವಿಧಾನವನ್ನು ಉದಾರೀಕರಣಗೊಳಿಸಲಾಗಿದೆ. ಇದರನ್ವಯ ಆಂಗ್ಲ ಮಾಧ್ಯಮವನ್ನು ಹೊರತು ಪಡಿಸಿ ಉಳಿದ ಮಾಧ್ಯಮಗಳ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದ ಪೂರ್ವಾನುಮತಿ ಅಗತ್ಯ ಇರುವುದಿಲ್ಲ.

ಮಕ್ಕಳನ್ನು ಶಾಲೆಗಳಲ್ಲಿ ಉಳಿಯುವಂತೆ ಮಾಡುವ ಸಲುವಾಗಿ ಒಂದನೇ ತರಗತಿಯ ಭೋದನೆಗೆ ಒಬ್ಬ ಪ್ರತ್ಯೇಕ ಉಪಾಧ್ಯಾಯರನ್ನು ನೇಮಿಸಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿದೆ. ಶಾಲೆಗಳನ್ನು ಆಕರ್ಷಣೀಯವಾಗಿ ಮಾಡುವ ದೃಷ್ಟಿಯಿಂದ ಸುಸಜ್ಜಿತ ಶಾಲಾ ಕೊಠಡಿಗಳ ನಿರ್ಮಾಣ, ಆಟದ ಮೈದಾನ ಮಕ್ಕಳಿಗೆ ಪ್ರವಾಸ ಏರ್ಪಡಿಸುವಿಕೆ, ಅವರಲ್ಲಿ ಹುದುಗಿರುವ ಪ್ರತಿಭೆಯನ್ನು ವಿಕಸನಗೊಳಿಸಲು ಕಲಾ ಶಿಕ್ಷಣ ಭೋಧನೆ ಮುಂತಾದ ಕಾರ್ಯಕ್ರಮಗಳನ್ನು ಮುಂದಿನ ವರ್ಷದಿಂದ ಜಾರಿಗೊಳಿಸಲು ನಿರ್ಧರಿಸಲಾಗಿದೆ.

ಒಟ್ಟಾರೆ ಶಾಲೆಗೆ ಬರುವ ಪ್ರತಿ ಮಗುವೂ ನಿಗಧಿತ ಕಲಿಕೆಯನ್ನು ಪಡೆದು ಮುಂದಿನ ಸತ್ಪ್ರಜೆಯಾಗಲು ಅವಕಾಶ ಮಾಡಿಕೊಡುವಂತಹ ಶಿಕ್ಷಣವನ್ನು ಒದಗಿಸುವ ಗುರಿಯನ್ನು ಹೊಂದಲಾಗಿದೆ.

ಪ್ರೌಢ ಶಾಲಾ ಹಂತದಲ್ಲಿ ಶೈಕ್ಷಣಿಕ ಸೌಲಭ್ಯಗಳ ವಿಸ್ತರಣೆಗಿಂತ ಹಾಲಿ ಇರುವ ಶಾಲೆಗಳಿಗೆ ಭೌತಿಕ ಸೌಲಭ್ಯಗಳನ್ನು ಒದಗಿಸಿ ಅವುಗಳನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ.

ಶೈಕ್ಷಣಿಕ ತಂತ್ರಜ್ಞಾನ, ವಿಜ್ಞಾನ ಶಿಕ್ಷಣ ಉತ್ತಮಪಡಿಸುವಿಕೆ, ಮುಂತಾದ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ನೆರವಿನೊಂದಿಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ವಿಷಯ : ರಾಜ್ಯದ ಡೈರಿಗಳಲ್ಲಿ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಅಧಿಕಾರಿ ವರ್ಗ.

867

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನೇಕ ಡೈರಿಗಳಲ್ಲಿ ನಿಗಧಿಪಡಿಸಿರುವುದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿ ವರ್ಗದವರಿದ್ದು, ಸಂಬಂಧಿಸಿದ ಡೈರಿ ನಿರ್ದೇಶಕರು ಉತ್ತಮ ರೀತಿಯಲ್ಲಿ ನಡೆಯುತ್ತಿಲ್ಲವೆಂದು ಸಾರ್ವಜನಿಕರು ದೂರಿರುವುದು ನಿಜವೇ?

ಆ) ಈ ರೀತಿ ಡೈರಿಯ ಆಡಳಿತ ವರ್ಗದವರು ಮನಸೋಇಚ್ಛೆ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿರುವುದರಿಂದ ಡೈರಿಗಳು ನಷ್ಟದಲ್ಲಿ ನಡೆಯಲು ಕಾರಣವಾಗಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಅನಾವಶ್ಯಕ ಹೆಚ್ಚಿನ ಸಂಖ್ಯೆಯಲ್ಲಿರುವ ಅಧಿಕಾರ ವರ್ಗವನ್ನು ಕಡಿಮೆಗೊಳಿಸಲು ಹಾಗೂ ಲಾಭದಾಯಕವಾಗಿ ನಡೆಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು)

(ಆ.ಆ.ಇ)
ಹಾಲು ಒಕ್ಕೂಟಗಳಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಗತ್ಯತೆ ವಹಿವಾಟನ್ನು ಅವಲಂಬಿಸಿರುತ್ತದೆ. ಪ್ರಸ್ತುತ ಸಿಬ್ಬಂದಿ ಸಂಖ್ಯೆ ಹೆಚ್ಚಾಗಿರುವುದರಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳೆರಡಕ್ಕೂ ಸಂಬಂಧಿಸಿದ ಚಟುವಟಿಕೆಗಳನ್ನು ವಿಸ್ತರಿಸಿ ಹೆಚ್ಚಿನ ಸಿಬ್ಬಂದಿಯ ಸೇವೆಯನ್ನು ಈ ಉದೇಶಕ್ಕೆ ಬಳಸಿಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಡೈರಿಗಳು ಅನುಭವಿಸುತ್ತಿರುವ ನಷ್ಟಕ್ಕೆ ಕಾರಣಗಳು ಹಲವಾರು. ಹೆಚ್ಚಿನ ಸಿಬ್ಬಂದಿಯಿಂದಷ್ಟೇ ಈ ನಷ್ಟವಾಗುತ್ತಿಲ್ಲ. ಡೈರಿಗಳ ಕಾರ್ಯ ನಿರ್ವಹಣೆಯನ್ನು ಏಕರೂಪಗೊಳಿಸುವ ಸಲುವಾಗಿ ಸರ್ಕಾರ ಮತ್ತುಕೆ.ಎಂ. ಎಫ್.,ಹಲವಾರು ಕ್ರಮಗಳನ್ನು ಕೈಗೊಂಡಿವೆ. ಇವುಗಳಲ್ಲಿ ಮೂರಾಟವನ್ನು ಹೆಚ್ಚಿಸುವುದು ನೇಮಕಾತಿಗಳ ಮೇಲೆ ನಿರ್ಬಂಧ ಹೇರುವುದು, ವಿಸ್ತರಣಾ ಕಾರ್ಯಕ್ರಮಗಳಲ್ಲಿ ಹಣ ತೊಡಗಿಸುವುದು , ಸಿಬ್ಬಂದಿಗೆ ತರಬೇತಿ ಮುಂತಾದವು ಸೇರಿವೆ.

ವಿಷಯಃ ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ರಾಣಿಗಳ ರಕ್ಷಣೆ.

1319
ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಮೈಸೂರು ಮೃಗಾಲಯಗಳಲ್ಲಿ ಪ್ರಾಣಿಗಳ ರಕ್ಷಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಕೇಶವ ಮೂರ್ತಿ (ಅರಣ್ಯ ರಾಜ್ಯ ಸಚಿವರು) :

ಅ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಹಾಗೂ ಮೈಸೂರು ಮೃಗಾಲಯದಲ್ಲಿ ವನ್ಯಜೀವಿ : ಪಕ್ಷಿಗಳು ಮತ್ತು ಸರೀಸೃಪಗಳ ರಕ್ಷಣೆಗೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲಿಗಳನ್ನು ಹಾಗೂ ಸಿಂಹಗಳನ್ನು ಕ್ರಮವಾಗಿ ಹುಲಿಧಾಮ ; ಸಿಂಹಧಾಮಗಳಲ್ಲಿ ಇಡಲಾಗಿದೆ. ಇತರ ಪ್ರಾಣಿಗಳನ್ನು ಸಾಕಷ್ಟು ಸ್ಥಳಾವಕಾಶ ಹಾಗೂ ಗಾಳಿ ; ಬೆಳಕಿರುವ ತಂತಿಗಳಿಂದ ರಚಿಸಿದ ಆವರಣದೊಳಗೆ ಇರಿಸಲಾಗಿದೆ.
2. ಪ್ರಾಣಿಗಳ ಆರೋಗ್ಯವನ್ನು ನೋಡಿಕೊಳ್ಳಲು ನುರಿತ ಪಶುವೈದ್ಯಾಧಿಕಾರಿಗಳಿರುತ್ತಾರೆ. ಅಗತ್ಯಬಿದ್ದಲ್ಲಿ ಹೆಬ್ಬಾಳ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಪರಿಣಿತರಿಂದ ಸಲಹೆ ಹಾಗೂ ಸಹಾಯವನ್ನು ಪಡೆದುಕೊಳ್ಳಲಾಗುತ್ತಿದೆ. ಮೈಸೂರಿನಲ್ಲಿ ಪ್ರಾಣಿ ; ಪಕ್ಷಿ ಹಾಗೂ ಸರೀಸೃಪಗಳ ಶುಶ್ರೂಷೆಗಾಗಿ ಒಂದು ಸುಸಜ್ಜಿತ ಪಶುವೈದ್ಯಾಲಯ ಸ್ಥಾಪಿಸಲಾಗಿದೆ.